3. ಚಡ ದರಖಾಸ್ತುದಾರನು ಕೂಡ್ಲಿ ಶೇಕಡಾ 25ರ ಪ್ರಕಾರ ಡಿಪಾಜಿಟ್ ಮೊಬಲಗನ್ನು ಯಿಡುವದಕ್ಕಾಗಲೀ ಬಾಕೀ ಮೊಬಲಗನ್ನು 15 ದಿನಗಳೊಳಗಾಗಿ ಕೊಡಲಿಕ್ಕಾಗಲೀ ತಪ್ಪಿದರೆ ಸದರೀ ಜಮೀನು ಚಡ ದರಖಾಸ್ತುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ವಳಪಟ್ಟು ಪುನಶ್ಚ ಹರಾಜು ಹಾಕಲ್ಪಡುವದು.

4. ಜಮೀನ್ ಕ್ರಯವನ್ನು ಡೆಪ್ಯುಟಿ ಕಮ್ಮಿಷನರವರಿಂದ ಕಾಯಂ ಮಾಡಲ್ಪಡುವ ತನಕ ಆಖೈರಾದ್ದಾಗಿರತಕ್ಕದ್ದಲ್ಲ.

5. ಜಮೀನಿನ ತಪಸೀಲಿನಲ್ಲಾಗಲೀ ಅಥವಾ ಅಂದಾಜಾ ಬೀಜವರೀಯಲ್ಲಾಗಲೀ ಯಿರುವ ಗಲ್ಲತಗಳಿಗೆ ಗವರ್ಮೆಂಟಿನವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು. ಇತರ ಹೆಚ್ಚಿಗೆ ತಪಸೀಲುಗಳು ಹರಾಜು ಕಾಲದಲ್ಲಿ ಕೇಳಿ ತಿಳದುಕೊಳ್ಳಬಹುದು.

6. ದರಖಾಸ್ತು ಮಾಡಲ್ಪಟ್ಟ ಜಂಗಲ್ ತಾಕು ಈ ಕೆಳಗೆ ಕಂಡ ಚಕ್ಕು ಬಂದಿಯಲ್ಲಿ ಅಡಗಿರುತ್ತೆ. ದರಖಾಸ್ತುದಾರನ ಖಾಯಿಷ್ ನಂತೆ ಸರ್ವೇ ಇಲಾಖೆಯವರಿಂದ ಸದರೀ ಜಮೀನ್ ಸರ್ವೇ ಮಾಡಲ್ಪಟ್ಟು ಬಾಂದು ಗುರ್ತುಗಳು ಹಾಕಲ್ಪಟ್ಟಿರುತವೆ, ಆದರೆ ಸರ್ವೆ ವ್ಯಾಪ್ತಿ ತಲ್ಪಿರುವದಿಲ್ಲವಾಗಿ ಕೊಡಲ್ಪಟ್ಟ ಚಕ್ಕು ಬಂದಿ ವ ಬೀಜವರೀ ಅಂದಾಜಾ ಆಗಿರುತ್ತೆ.

ದರಖಾಸ್ತು ಮಾಡಿರುವ ಜಂಗಲ್ ತಪಸೀಲ್‌ಗಳು—

ಡಿಸ್ಟ್ರಿಕ್ಟು	..	ಕಡೂರು.	ಗ್ರಾಮ	..	ಜೈರೆದೇವರು.
ತಾಲ್ಲೂಕು	..	ಕೊಪ್ಪ.	ಸರ್ವೆ ನಂಬರ್		159 ವ 194ರ ಭಾಗಗಳು.
ಮಾಗಣಿ	..	ಮೇಗುಂದ.	ಬೀಜವರೀ		ಫುಮಾರ್ ಯಂಭತ್ತು ಎಕರೆಗಳು.

ಚಕ್ಕು ಬಂದಿ.

ಪೂರ್ವಕ್ಕೆ—ಬೆಟ್ಟದ ಕೊಳಲು ಗ್ರಾಮದ ಯಲ್ಲೆ.	ಪಶ್ಚಿಮಕ್ಕೆ—ಕಮ್ಮಾರ್‌ಮಂಣು ತರೀ ಜಮೀನ್.
ದಕ್ಷಿಣಕ್ಕೆ—ಕುಡಗೋಲೆಹಿಡಿ ಬಿಳಲು.	ಉತ್ತರಕ್ಕೆ—ಕೊಟ್ಟೋಡಿ ಕಾಫೀ ಯಸ್ಟೇಟ್.

ಮಹಮ್ಮದಲ್ಲೀ, ಕೆ. ಬಿ.,
ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

ಸ್ಯ 1884ನೇ ಇಸವಿ ಅಕ್ಟೋಬರ್ ತಿಂಗಳ ಕಾಲಸ್ಥಿತೀ ರಿಪೋರ್ಟುಗಳು.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಮಳೆ.—ಸದರೀ ಮೂಹೆಯಲ್ಲಿ ಇದರಡೀ ಕಂಡಪ್ರಕಾರ ಮಳೆ ಆಗಿರುತ್ತೆ:—

	ಇಂ.	ಸೆಂ.		ಇಂ.	ಸೆಂ.
ಶಿವಮೊಗ್ಗಾ ..	4	78	ಸಾಗರ ..	1	70
ಚನ್ನಗಿರಿ ..	2	25	ನಗರ ..	5	45
ಹೊನ್ನಾಳಿ ..	4	65	ತೀರ್ಥಹಳ್ಳಿ ..	4	54½
ಶಿಕಾರಿಪುರ ..	4	70	ದಾವಣಗೆರೆ ..	2	95
ಸೊರಬ ..	3	50			

ಪೇರಾವಾದಧಾನ್ಯ.—ಸದರೀ ಮೂಹೆಯಲ್ಲಿ ಕಡ್ಲೆ, ವುದ್ದು, ಹೆಸರು, ಹರಳು, ಹುರಳಿ, ಯಳ್ಳು, ನವಣೆ, ಜೋಳ ಮತ್ತು ಹತ್ತಿ ಇವು ಬಿತ್ತಲ್ಪಟ್ಟವು.

ಫಸಲಿನ ಸ್ಥಿತಿ.—ಮಳೆಯಿಲ್ಲದೆ ಬಾಡುತಲಿದ್ದ ಫಸಲುಗಳು ಸದರೀ ಮೂಹೆ ಆಖೈರ್ ಭಾಗದಲ್ಲಿ ಬಿದ್ದ ಮಳೆಯಿಂದ ಅಭಿವೃದ್ಧಿಯಾಗುತಲಿದೆ.

ಕಟಾವಾದ ಫಸಲು.—ಸದರೀ ಮೂಹೆಯಲ್ಲಿ ರಾಗಿ, ಜೋಳ, ವುದ್ದು, ಹೆಸರು, ಕುರಾಸಾನಿ, ಅಡಿಕೆ, ಇಲಾಚಿ ಮತ್ತು ಯಳ್ಳು ಇವು ಕಟಾವಾದವು.

ಜನಾರೋಗ್ಯ.—ಸಾಧಾರಣವಾಗಿ ಛಂದಾಗಿದೆ. ದಾವಣಗೆರೆ ತಾಲ್ಲೂಕು ಹರಿಹರದಲ್ಲಿ ಸದರೀ ಮೂಹೆ ಆಖೈರ್‌ಭಾ ದಲ್ಲಿ ಮುವ್ವರು ಉಖಾಲ್‌ಜ್ವರಾಬ್ ಉಪದ್ರವದಿಂದ ವ್ಯಕ್ತಪಟ್ಟಂತೆ ರಿಪೋರ್ಟಾಗಿರುತ್ತೆ.

ಕಾಲ್ನಡೆ.—ದಾವಣಗೆರೆ ತಾಲ್ಲೂಕಿನಲ್ಲಿ ನೀರು, ಮೇವು ಇಲ್ಲದೆ ನಾದಾತಾಗಿದ್ದ ದನಗಳು ಈಚಿಗೆ ಬಳ್ಳೇಯಸ್ಥಿತಿಯಲ್ಲಿರುವದಾಗಿ ರಿಪೋರ್ಟಾಗಿರುತ್ತೆ.

ದಾರಣೆ.—ಒಂದೇ ರೀತಿಯಾಗಿದೆ.

ಪಿ. ಪಂಚನಾಥರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್.